

ಮೆಲ್ಬರ್ನ್‌ನಲ್ಲಿ ಫ್ರಿಂಜ್ ಮೇಳಕ್ಕೆ ಭೇಟಿ ಕೊಟ್ಟ ಜನ ನೇಕೆಡ್ ಬ್ರಂಚ್‌ಗೆ ಮುಗಿದು ಬಿದ್ದರು. ಅಲ್ಲಿ ಒಳಗೆ ಎಂಟ್ರಿ ಬೇಕೆಂದರೆ ಉಟ್ಟ ಉಡುಪಿಗೆ ಗುಡ್‌ಬೈ ಹೇಳಬೇಕು. ಜೊತೆಗೆ ಪುರುಷ ಸ್ಟ್ರಿಪ್ಪರ್‌ಗಳು.. 'ಮಾನವ ದೇಹದ ಆಚರಣೆ' ಎಂದು ಹೆಸರು ಕೊಟ್ಟ ಜನ ಕೃತಾರ್ಥರಾದರಂತೆ.

ಮದುವೆಯಾದರೆ ಹುಚ್ಚು ಬಿಡುವುದಂತೆ ಆದರೆ ಕೊಲಂಬಿಯಾದ ಈ ಜೋಡಿಗೆ ಮದುವೆಯಲ್ಲೂ ಹುಚ್ಚು ಬಿಡಲಿಲ್ಲ. ಭೂತಗಳ ಧಿರಿಸಿನಲ್ಲಿ ಮದುವೆ. ಆಗಮಿಸಿದ ಅತಿಥಿಗಳಿಂದಲೂ ಭೂತ ನರ್ತನ. ಊಟಕ್ಕೂ ಭೂತ ಭೋಜನವಾದ ಮೂಳೆಗಳ ರಾಶಿ. ಕೊನೆಯ ಕಾರ್ಯಕ್ರಮವಾದ ಮೊದಲ ರಾತ್ರಿ ಸ್ಮಶಾನದಲ್ಲಿ ಏರ್ಪಡಿಸಿದ್ದರೇ ಎಂಬುದು ಗೊತ್ತಾಗಲಿಲ್ಲ.





ಓಹಿಯೋದಲ್ಲಿ ಕ್ರಿಸ್ಟಿ ಬೆಳೆದ ಕುಂಬಳಕಾಯಿಯ ತೂಕ ಬರೋಬ್ಬರಿ 1725 ಪೌಂಡ್. ಜೊತೆಗೆ 2500 ಡಾಲರ್ ಬಹುಮಾನ. ಪರೀಕ್ಷೆಯಲ್ಲಿ ಸೊನ್ನೆ ಅಂಕ ಬಂದರೆ ಇನ್ನು ಮೇಲೆ ಓಹಿಯೊ ಕುಂಬಳಕಾಯಿಯಾ ಅಥವಾ ಭಾರತದ ಕುಂಬಳವಾ ಎನ್ನುವ ಗೊಂದಲ ಮೂಡಿದರೆ...



ಆಟದ ಅಂಗಣದಲ್ಲಿ ಕೈಕಾಲು ಕೈ ಕೊಟ್ಟ ಮೇಲೆ ಟೆನ್ನಿಸ್ ತಾರೆ ಸೆರೀನಾಗೆ ದೇಹದ ಕಡೆ ಗಮನ ಹೋಗಿದೆ. ರ‍್ಯಾಕೆಟ್ ಜೊತೆ ಉಡುಪನ್ನೂ ಬದಿಗಿಟ್ಟ ಸೆರೀನಾ ಹಣದ ಗುಡ್ಡೆ ಹಾಕಲು ಇಎಸ್‌ಪಿಎನ್ ನಿಯತಕಾಲಿಕಕ್ಕೆ ನೀಡಿದ ಭಂಗಿ ಈಗ ಟೆನ್ನಿಸ್‌ಗೆ ಟಾಟಾ ಹೇಳುವ ಮಟ್ಟಕ್ಕೆ ಹೋಗಿದೆಯಂತೆ.



ಫಿಲಿಪ್ಪೀನ್ ಮಾಜಿ ಅಧ್ಯಕ್ಷರ ಪತ್ನಿ ಇಮೆಲ್ಡಾ ಮಾರ್ಕೋಸ್ ಪಾದರಕ್ಷೆ ಹುಚ್ಚು ಹಳೆಯ ಸುದ್ದಿ. ಆಕೆಯ ಬಳಿಯಿದ್ದ ಸಾವಿರಾರು ಪಾದರಕ್ಷೆಗಳಿಗೇ ಮನಿಲಾದಲ್ಲಿ ಒಂದು ವಸ್ತು ಸಂಗ್ರಹಾಲಯವಿದೆ. ಈಚೆಗೆ ಸುರಿದ ಭಾರಿ ಮಳೆಗೆ ಜನರೆಲ್ಲ ಮನೆ ರಕ್ಷಿಸಿಕೊಳ್ಳಲು ಹರ ಸಾಹಸ ಪಟ್ಟರೆ ಸಂಗ್ರಹಾಲಯದ ಸಿಬ್ಬಂದಿ ಶೂಗಳನ್ನೆತ್ತಿಕೊಂಡು ಓಡಿದರಂತೆ.

ತೈವಾನ್‌ನಲ್ಲಿ ಕಸ ವಿಲೇವಾರಿಗೆ ಅಧಿಕಾರಿಗಳು ಹೊಸ ಉಪಾಯ ಕಂಡು ಹಿಡಿದಿದ್ದಾರೆ. ಬೀದಿಯಲ್ಲಿ ಬಿದ್ದ ಒಂದು ಕೆಜಿ ನಾಯಿಯ ಮಲ ಸಂಗ್ರಹಿಸಿದರೆ ಮೂರು ಡಾಲರ್ ಬಹುಮಾನವಂತೆ. ಸಂಗ್ರಹಿಸಿದ್ದನ್ನು ತೂಗುವ ದುರದೃಷ್ಟ ಯಾರದ್ದೋ. ಜೊತೆಗೆ ಬೇರೆ ಕಸ ನಾಯಿ ಕಸದ ಜೊತೆ ಒಂಚೂರು ಸೇರಬಾರದಂತೆ!

ಪ್ಯಾಲೆಸ್ತೀನ್ ಮೃಗಾಲಯದಲ್ಲಿದ್ದ ಜೀಬ್ರಾಗಳು ಹೊಟ್ಟೆಗಿಲ್ಲದೇ ಖಲಾಸ್. ಮಕ್ಕಳು ಪಟ್ಟೆ ಪೈಜಾಮ ತೊಟ್ಟ ಪ್ರಾಣಿ ನೋಡಬೇಕೆಂದು ಹಟ ಮಾಡಿದಾಗ ಮೃಗಾಲಯದಲ್ಲಿದ್ದ ಕತ್ತೆಗಳಿಗೇ ಪಟ್ಟೆ ಬಳಿದು ಬೆನ್ನು ತಟ್ಟಿಕೊಂಡರು ಸಿಬ್ಬಂದಿ. ತೋಳದ ಚರ್ಮ ಹೊದ್ದುಕೊಂಡ ನರಿಯಂತೆ..



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65